ಉ) ಹೌದು.

ಊ) ಈಗಾಗಲೇ ಉನ್ನತ ಮಟ್ಟದಲ್ಲಿ ಸಭೆಯನ್ನು ನಡೆಸಿ ಕೆ.ಹೆಚ್.ಬಿ.ಯವರು ರಕ್ಷಣಾ ಇಲಾಖೆಗೆ ಕೊಡಬೇಕಾಗಿರುವ 214 ವಸತಿ ಗೃಹಗಳನ್ನು ವಾಸಕ್ಕೆ ಯೋಗ್ಯವಾದ ರೀತಿಯಲ್ಲಿ ಕೊಡಲು ಕ್ರಮ ತೆಗೆದುಕೊಳ್ಳಲಾಗಿದೆ.

ರಾಜ್ಯದ ವಿವಿಧ ಇಲಾಖೆಯಲ್ಲಿರುವ ಖಾಲಿ ಹುದ್ದೆಗಳ ಭರ್ತಿ

1270 -ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು? (ಎ,ಬಿ,ಸಿ,ಡಿ ಪ್ರತ್ಯೇಕವಾಗಿ)*

ಆ) *ಇವುಗಳಲ್ಲಿ ನೇರ ನೇಮಕಾತಿ ಮೂಲಕ ತುಂಬುವ ಹುದ್ದೆಗಳ ಸಂಖ್ಯೆ ಎಷ್ಟು? (ಇಲಾಖೆವಾರು)*

ಇ) *ಬ್ಯಾಕ್‌ಲಾಗ್ ಮೂಲಕ ತುಂಬುವ ಹುದ್ದೆಗಳೆಷ್ಟು? (ಇಲಾಖಾವಾರು)*

ಈ) *ಈ ಖಾಲಿ ಹುದ್ದೆಗಳನ್ನು ತುಂಬಲು ಸರ್ಕಾರವು ಕೈಗೊಂಡ ಕ್ರಮಗಳೇನು?*

ಶ್ರೀ ಜೆ.ಹೆಚ್. ಪಟೇಲ್ (ಮುಖ್ಯಮಂತ್ರಿಗಳು) :

ಅ) 1,06,267. (1997-98ರಲ್ಲಿರುವಂತೆ) ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ನಿಗಧಿಪಡಿಸಿದ ಪಾಲಿನ (quota) ರ ಪ್ರಕಾರ, ನೇಮಕಾತಿ ಮಾಡುವ ಪ್ರತಿಯೊಂದು ಸಂದರ್ಭದಲ್ಲಿ ನೇಮಕಾತಿಗಾಗಿ ಲಭ್ಯವಿರುವ ಖಾಲಿ ಹುದ್ದೆಗಳನ್ನು ನೇರ ನೇಮಕಾತಿ ರಿಕ್ತ ಸ್ಥಾನಗಳನ್ನಾಗಿ ವರ್ಗೀಕರಿಸಲಾಗುವುದು. ಆದುದರಿಂದ, ನಿರ್ದಿಷ್ಟವಾಗಿ ನೇರ ನೇಮಕಾತಿಗೆ ಎಷ್ಟು ಹುದ್ದೆಗಳಿವೆ ಎಂಬುದನ್ನು ಹೇಳಲು ಸಾಧ್ಯವಿಲ್ಲ.

ಇ) ಲಭ್ಯವಿರುವ ಮಾಹಿತಿಯ ಪ್ರಕಾರ 719.

ಈ) ಬ್ಯಾಕ್‌ಲಾಗನ್ನು ಸರಿದೂಗಿಸುವ ಬಗ್ಗೆ ದಿನಾಂಕ27.4.78ರ ಆದೇಶ ಸಂಖ್ಯೆ:ಡಿಪಿಎಆರ್ 29 ಎಸ್‌ಬಿಸಿ 77 ಹಾಗೂ ನಂತರ ದಿನಾಂಕ 24.6.97ರ ಆದೇಶ ಸಂಖ್ಯೆ:ಡಿಪಿಎಆರ್ 10 ಎಸ್‌ಬಿಸಿ 97ರಲ್ಲಿ ಮಾರ್ಗಸೂಚನೆಗಳನ್ನು ನೀಡಲಾಗಿದೆ.

ಅನುಬಂಧ

ರಾಜ್ಯದ ವಿವಿಧ ಇಲಾಖೆಗಳಲ್ಲಿ 1997-98 ರಲ್ಲಿ ಖಾಲಿ ಇರುವ ಹುದ್ದೆಗಳು

ಕ್ರಮ ಸಂಖ್ಯೆ	ಇಲಾಖೆಯ ಹೆಸರು	ಒಟ್ಟು ಖಾಲಿ ಹುದ್ದೆಗಳು
1	2	3
1.	ಒಳಾಡಳಿತ ಮತ್ತು ಸಾರಿಗೆ ಇಲಾಖೆ	3122
2.	ಆರ್ಥಿಕ ಇಲಾಖೆ	2402
3.	ಶಿಕ್ಷಣ ಇಲಾಖೆ	35189
4.	ಲೋಕೋಪಯೋಗಿ ಇಲಾಖೆ	1788
5.	ನೀರಾವರಿ ಇಲಾಖೆ	3935
6.	ಕಾನೂನು ಇಲಾಖೆ ಮತ್ತು ಸಂಸದೀಯ ವ್ಯವಹಾರಗಳು ಶಾಸನ ರಚನೆ ಇಲಾಖೆ	3483
7.	ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ	21945
8.	ಸಮಾಜ ಕಲ್ಯಾಣ ಇಲಾಖೆ	4487
9.	ಕಾರ್ಮಿಕ ಇಲಾಖೆ	922
10.	ವಾರ್ತಾ, ಪ್ರವಾಸೋದ್ಯಮ ಮತ್ತು ಯುವಜನ ಸೇವಾ ಇಲಾಖೆ	668
11.	ಕನ್ನಡ ಮತ್ತು ಸಂಸ್ಕೃತಿ ಇಲಾಖೆ	269
12.	ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ	700
13.	ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ	2502
14.	ವಸತಿ ಇಲಾಖೆ	15
15.	ನಗರಾಭಿವೃದ್ಧಿ ಇಲಾಖೆ	517
16.	ಪಶುಸಂಗೋಪನೇ ಮತ್ತು ಮೀನುಗಾರಿಕೆ ಇಲಾಖೆ	4294
17.	ಅರಣ್ಯ, ಜೀವಶಾಸ್ತ್ರ ಮತ್ತು ಪರಿಸರ ಇಲಾಖೆ	2119
18.	ಕೃಷಿ ಮತ್ತು ತೋಟಗಾರಿಕೆ ಇಲಾಖೆ	3444
19.	ಕಂದಾಯ ಇಲಾಖೆ	5302
20.	ಸಹಕಾರ ಇಲಾಖೆ	1340

1	2	3
21.	ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ	256
22.	ಯೋಜನೆ, ಸಾಂಖ್ಯಿಕ ಹಣಕಾಸು ಮತ್ತು ಸಾಂಖ್ಯಿಕ ಮತ್ತು ವಿಜ್ಞಾನ ಮತ್ತು ಯಂತ್ರಕಲೆ ಇಲಾಖೆ	343
23.	ಇಂಧನ ಇಲಾಖೆ	3
24.	ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ	2779
25.	ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ	880
26.	ರಾಜ್ಯಪಾಲರ ಸಚಿವಾಲಯ	24
27.	ಇತರೆ ಆಡಳಿತ ಸೇವೆಗಳು	2654
28.	ಇತರೆ ಸಾಮಾನ್ಯ ಆರ್ಥಿಕ ಸೇವೆಗಳು	865
		1,06,247

ಬೆಂಗಳೂರು ನಗರಪಾಲಿಕೆಯ ಮನೆ ಕಂದಾಯ.

1271 -ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರ ಪಾಲಿಕೆಯು ಮನೆಗಳ ಮೇಲಿನ ಕಂದಾಯವನ್ನು ಯಾವ ಆಧಾರದ ಮೇಲೆ ನಿಗದಿಗೊಳಿಸಲಾಗುತ್ತಿದೆ?

ಆ) ಈ ಮನೆ ಕಂದಾಯವನ್ನು ಎಷ್ಟು ವರ್ಷ ವರ್ಷಗಳಿಗೊಮ್ಮೆ ಪುನರ್ ಪರಿಶೀಲಿಸಲಾಗುತ್ತಿದೆ?

ಇ) ಮನೆ ಕಂದಾಯವನ್ನು ಪದೇ ಪದೇ ಹೆಚ್ಚಿಸುವ ಬದಲು ವಾಣಿಜ್ಯ ಸಂಕೀರ್ಣಗಳು, ಕಲ್ಯಾಣ ಮಂಟಪಗಳು, ದೊಡ್ಡ ದೊಡ್ಡ ಕೈಗಾರಿಕೆಗಳ ಮೇಲೆ ಹೆಚ್ಚಿನ ತೆರಿಗೆ ವಿಧಿಸುವ ಉದ್ದೇಶ ಸರ್ಕಾರದ ಮುಂದೆ ಇದೆಯೇ?

ಈ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರವು ಕೈಗೊಂಡ ಕ್ರಮಗಳೇನು?

ಶ್ರೀ ಅನಂತ್ ನಾಗ್ (ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು) :

ಅ) ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ 1976ರ ಪ್ರಕರಣ 109ರ ಅನುಸಾರ ಒಂದು ಕಟ್ಟಡದಿಂದ ಪಡೆಯಬಹುದಾದ ಭಾಡಿಗೆ ಆಧಾರದ ಮೇಲೆ ಅಥವಾ ನಿವೇಶನದ ಮೌಲ್ಯ ಮತ್ತು ಕಟ್ಟಡದ ಸೌಲಭ್ಯದ ಮೇಲೆ ಶೇಕಡಾ 6ರಷ್ಟನ್ನು ಪರಿಗಣಿಸಿ, ವಾರ್ಷಿಕ ಮೌಲ್ಯವನ್ನು ನಿಗಧಿಪಡಿಸಲಾಗುತ್ತದೆ. ಮತ್ತು ಕಂದಾಯ ವಿಧಿಸಲಾಗುತ್ತದೆ.